


# ಗ್ಯಾದರಿಂಗ್ ಫುಟ್

## ಈ ಟ್ಯುಟೋರಿಯಲ್ ನಲ್ಲಿ ನೀವು ಉಷಾ ಜನೋಮೆ ಗ್ಯಾದರಿಂಗ್ ಫುಟ್ ಬಳಸುವುದನ್ನು ಕಲಿಯುವಿರಿ.














ಅದರ ಹೆಸರೇ ಸೂಚಿಸುವಂತೆ ಅದು ಯಾವುದೇ ಬಟ್ಟೆಯಲ್ಲಿ ಗ್ಯಾದರ್ ಗಳನ್ನು ಮಾಡಲು ಸಹಾಯ ಮಾಡುತ್ತದೆ.

ತುಂಡಲ್ಲಿ ಮೃದುವಾದ ಗ್ಯಾದರ್ ಗಳನ್ನು ಮಾಡಲು ಸಹಾಯ ಮಾಡುವುದಲ್ಲದೆ, ಗ್ಯಾದರ್ ಗಳು ಬೇಕಾಗಿರುವ ಒಂದು ಬಟ್ಟೆ ಮತ್ತು ಬೇಡದಿರುವ ಮತ್ತೊಂದು ತುಂಡು ಬಟ್ಟೆಯನ್ನು ಒಟ್ಟಿಗೆ ಜೋಡಿಸಲೂ ಸಹ ಸಹಾಯ ಮಾಡುತ್ತದೆ. ಉದಾಹರಣೆಗೆ ಅಳತೆಗೆ ತಕ್ಕ ಟಾಪ್ ಒಂದರ ಜೊತೆ ಸೊಂಟದ ಬಳಿ ಗ್ಯಾದರ್ ಗಳನ್ನು ಹೊಂದಿರುವ ಒಂದು ಸುಂದರವಾದ ಡ್ರೆಸ್.

ಉಷಾ ಜನೋಮೆ ಗ್ಯಾದರಿಂಗ್ ಫೂಟ್ನೊಂದಿಗೆ ಗ್ಯಾದರ್ ಗಳನ್ನು ಮಾಡುವುದು ಹೇಗೆ ಎಂದು ತಿಳಿಯಲು, ನಿಮಗೆ 21 x 8 ಇಂಚುಗಳಷ್ಟು ಅಳತೆಯ ಒಂದು ಬಟ್ಟೆಯ ತುಂಡು ಮತ್ತು 8 x 8 ಇಂಚುಗಳು ಮತ್ತು 24 x 8 ಇಂಚುಗಳಷ್ಟು ಅಳತೆಯ ಎರಡು ಬಟ್ಟೆಯ ತುಂಡುಗಳು ಮತ್ತು ಅದಕ್ಕೆ ಸರಿಹೊಂದುವ ಬಣ್ಣದ ದಾರಗಳು ಬೇಕಾಗುತ್ತವೆ.

ಮೊದಲಿಗೆ ಒಂದು ಬಟ್ಟೆಯಲ್ಲಿ ಮೃದುವಾದ ಗ್ಯಾದರ್ ಗಳನ್ನು ಮಾಡುವುದು ಹೇಗೆ ಎಂಬುದನ್ನು ನಾವು ಕಲಿಯೋಣ - ನಾನು ಮಾಡುತ್ತಿರುವ ಹಾಗೆ ಫುಟ್ ಸ್ಕ್ರೂ ಅನ್ನು ಲೂಸ್ ಮಾಡಿ ನಾರ್ಮಲ್ ಪ್ರೆಸ್ಸರ್ ಫುಟ್ ಅನ್ನು ತೆಗೆದುಹಾಕಿ. ಗ್ಯಾದರಿಂಗ್ ಫುಟ್ ಅನ್ನು ಸೇರಿಸಿ ಮತ್ತು ಸ್ಕ್ರೂವನ್ನು ಬಿಗಿಯಾಗಿ ತಿರುಗಿಸಿ.

ಪ್ಯಾಟರ್ನ್ ಸೆಲೆಕ್ಟರ್ ಅನ್ನು A ಗೆ ತಿರುಗಿಸುವ ಮೂಲಕ ನಿಮ್ಮ ಮಶೀನನ್ನು ಹೊಂದಿಸಿಕೊಳ್ಳಿ, ಸ್ಟಿಚ್ ಲೆಂತ್ ಅನ್ನು ಮ್ಯಾಕ್ಸಿಮಮ್ ಗೆ ಇರಿಸಿ, ಮತ್ತು ಥ್ರೆಡ್ ಟೆನ್ಶನ್ ಅನ್ನು ಮ್ಯಾಕ್ಸಿಮಮ್ ಗೆ ಇರಿಸಿ.






\ಗ್ಯಾದರಿಂಗ್ ಫುಟ್ ನ ಅಡಿಯಲ್ಲಿ ಒಂದು ಉದ್ದವಾದ ಬಟ್ಟೆಯನ್ನು ಇರಿಸಿ ಮತ್ತು ನೀವು ಹೊಲಿಗೆಯನ್ನು ಪ್ರಾರಂಭಿಸಿ ಮತ್ತು ನಿಮ್ಮ ಮಶೀನ್ ಎಲ್ಲಾ ಕೆಲಸವನ್ನು ಮಾಡುವುದನ್ನು ನೋಡಿ ಆನಂದಿಸಿ... ನೀವು ಹೊಲಿಯುತ್ತಿದ್ದಂತೆಯೇ ನಿಮ್ಮ ಬಟ್ಟೆ ಮೆದುವಾಗಿ ಕೂಡಿಕೊಳ್ಳುತ್ತಾ ಹೋಗುತ್ತದೆ.



ಕೆಲಸ ಮುಗಿದ ನಂತರ ದಾರವನ್ನು ಕತ್ತರಿಸಿ, ಮತ್ತು ನಿಮ್ಮ ಬಳಿ ಈಗ ಗ್ಯಾದರ್ ಮಾಡಲಾದ ಬಟ್ಟೆ ಇರುತ್ತದೆ.

ಈಗ ನಾವು ಇದನ್ನು ಮತ್ತೊಂದು ಹಂತಕ್ಕೆ ತೆಗೆದುಕೊಳ್ಳೋಣ ಮತ್ತು ಗ್ಯಾದರಿಂಗ್ ಫುಟ್ ಅನ್ನು ಬಳಸಿಕೊಂಡು ಎರಡು ತುಂಡು ಬಟ್ಟೆಗಳನ್ನು ಸೇರಿಸಿ ಹೊಲಿಯುವುದು ಹೇಗೆ ಎಂದು ತಿಳಿಯೋಣ.

ಫುಟ್ ನ ಕೆಳಗೆ ಬೇಸ್ ಬಟ್ಟೆಯ ಉದ್ದನೆಯ ತುಂಡನ್ನು ಇರಿಸಿ, ನಂತರ ಅದರ ಮೇಲೆ ಅದೇ ಬಟ್ಟೆಯ ಸಣ್ಣ ತುಂಡನ್ನು ಉಲ್ಟಾ ಮಾಡಿ ಇರಿಸಿ, ಅದನ್ನು ಗ್ಯಾದರಿಂಗ್ ಫೂಟ್ನೊಳಗೆ ಸೇರಿಸಿ.

ಸೇರಿಸಿದ ಬಟ್ಟೆಯ ಈ ಮೇಲಿನ ತುಂಡು ಸ್ವಲ್ಪ ಲೂಸ್ ಆಗಿರುತ್ತದೆ, ಆದ್ದರಿಂದ ಹೊಲಿಯುವಾಗ ಅದನ್ನು ನೇರವಾಗಿ ಹಿಡಿದುಕೊಳ್ಳಿ.
ಫುಟ್ ಅನ್ನು ಕೆಳಕ್ಕೆ ಮಾಡಿ ಮತ್ತು ಹೊಲಿಗೆಯನ್ನು ಪ್ರಾರಂಭಿಸಿ.



ಫುಟ್ ನ ಕೆಳಗಿರುವ ಬಟ್ಟೆಯ ತುಂಡಿನ ಮೇಲೆ ಗ್ಯಾದರ್ ಗಳು ಬರುತ್ತವೆ ಮತ್ತು ಮೇಲಿನ ತುಂಡು ಇತರ ಬಟ್ಟೆಯ ತುಂಡಿನ ಮೇಲೆ ಹೊಲಿದುಕೊಳ್ಳುತ್ತದೆ. ಈ ರೀತಿ ಆಗುವುದನ್ನು ನೋಡಲು ಬಹಳಾ ಆಕರ್ಷಕವಾಗಿರುತ್ತದೆ.

ನೀವು ಗ್ಯಾದರ್ ಮಾಡದೆ ಇರುವ ತುಂಡಿನ ಅಂತ್ಯವನ್ನು ತಲುಪಿದಾಗ, ಅದನ್ನು ಮಶೀನಿನಿಂದ ತೆಗೆದು ಹೆಚ್ಚುವರಿ ಬಟ್ಟೆಯನ್ನು ಕತ್ತರಿಸಿ.



ಅದ್ಭುತವಾಗಿತ್ತಲ್ವಾ. ನಿಮ್ಮ ಹಳೆಯ ಬಟ್ಟೆಗೆ ಒಂದು ರೆಟ್ರೊ ಟಚ್ ಅನ್ನು ನೀಡಲು ನಿರಿಗೆಗಳು ಮತ್ತು ಗ್ಯಾದರ್ ಗಳನ್ನು ಸೇರಿಸಿ. ದೊಡ್ಡ ದೊಡ್ಡ ನಿರಿಗೆಗಳಿರುವ ಒಂದು ಪೆನ್ಸಿಲ್ ಸ್ಕರ್ಟ್ ಇದ್ದರೆ ಹೇಗೆ... ವಾಹ್! ಬನ್ನಿ - ಯಾವುದೇ ಬಟ್ಟೆ ಅಥವಾ ಪರಿಕರಗಳಿಗೆ ಪೂರ್ಣತೆ ಮತ್ತು ಆಡಂಬರವನ್ನು ಸೇರಿಸಲು ಪ್ರಯತ್ನಿಸಿ.

ಸೃಜನಶೀಲರಾಗಿರಿ – ಅವು ಸುಂದರಾವಾಗಿ ಮೂಡಬಹುದು ಅಥವಾ ಅವುಗಳಿಗೆ ಕಣ್ಕಟ್ಟುವ ಸೊಬಗೂ ಇರಬಹುದು.